ಓಂ ಶಾಂತಿ, ಬಾಪ್‌ದಾದಾ , ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 14-11-2002.

# *ಬ್ರಾಹ್ಮಣ ಜೀವನದ ಬುನಾದಿ(ತಳಪಾಯ) ಮತ್ತು ಸಫಲತೆಗೆ ಆಧಾರ - ನಿಶ್ಚಯ ಬುದ್ಧಿ*

(ब्राह्मण जीवन का फाउण्डेशन और सफलता का आधार - निश्चयबुद्धि)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸಮರ್ಥ ತಂದೆಯು ತನ್ನ ನಾಲ್ಕೂ ಕಡೆಯ ಸಮರ್ಥ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗು ಸಮರ್ಥನಾಗಿ ತಂದೆಯ ಸಮಾನರಾಗುವ ಶ್ರೇಷ್ಠ ಪುರುಷಾರ್ಥದಲ್ಲಿ ತೊಡಗಿದ್ದಾರೆ. ಮಕ್ಕಳ ಆಸಕ್ತಿಯನ್ನು ನೋಡಿ ಬಾಪ್‌ದಾದಾರವರೂ ಸಹ ಹರ್ಷಿತರಾಗುತ್ತಿದ್ದಾರೆ. ಮಕ್ಕಳ ಈ ಧೃಡ ಸಂಕಲ್ಪ ಬಾಪ್‌ದಾದಾರವರಿಗೂ ಸಹ ಪ್ರಿಯವೆನಿಸುತ್ತದೆ. ಬಾಪ್‌ದಾದಾರವರಂತೂ ಮಕ್ಕಳಿಗೆ ತಂದೆಗಿಂತಲೂ ಸಹ ಮುಂದೆ ಹೋಗಬಹುದೆಂದು ಹೇಳುತ್ತಾರೆ. ಏಕೆಂದರೆ ಸ್ಮೃತಿಚಿಹ್ನೆಯಲ್ಲೂ ಸಹ ತಂದೆಯ ಪೂಜೆ ಒಂದೇ (ಸಿಂಗಲ್) ಆಗಿದೆ. ಮಕ್ಕಳ ಪೂಜೆಯೇ ಡಬಲ್ ಆಗಿದೆ. ಬಾಪ್‌ದಾದಾರವರ ಕಿರೀಟವೂ ಸಹ ಆಗಿದ್ದೀರಿ. ಬಾಪ್‌ದಾದಾ ಮಕ್ಕಳ ಸ್ವಮಾನವನ್ನು ನೋಡಿ ಭಲೆ ಶ್ರೇಷ್ಠ ಸ್ವಮಾನಧಾರಿ, ಸ್ವರಾಜ್ಯಧಾರಿ ಮಕ್ಕಳೇ ಭಲೆ! ಎಂದು ಹೇಳುತ್ತಾರೆ. ಪ್ರತಿಯೊಬ್ಬ ಮಗುವಿನ ವಿಶೇಷತೆಯು ತಂದೆಗೆ ಪ್ರತಿಯೊಬ್ಬ ಮಗುವಿನಲ್ಲಿ ಹೊಳೆಯುತ್ತಿರುವ ರೂಪದಲ್ಲಿ ಕಂಡುಬರುತ್ತದೆ. ನೀವು ನಿಮ್ಮ ವಿಶೇಷತೆಯನ್ನು ತಿಳಿದು, ಅರ್ಥ ಮಾಡಿಕೊಂಡು ಸೇವೆಯಲ್ಲಿ ಉಪಯೋಗಿಸುತ್ತಾ ಹೋಗಿ. ಪರಿಶೀಲನೆ ಮಾಡಿಕೊಳ್ಳಿರಿ - ನಾನು ಪ್ರಭು ಪ್ರಿಯ,

ಪರಿವಾರದ ಪ್ರಿಯ ಎಲ್ಲಿಯವರೆಗೆ ಆಗಿದ್ದೇನೆ ಎಂದು ಏಕೆಂದರೆ ಸಂಗಮಯುಗದಲ್ಲಿ ತಂದೆಯು ಬ್ರಾಹ್ಮಣ ಪರಿವಾರವನ್ನು ರಚಿಸುತ್ತಾರೆ. ಅಂದಾಗ ಪ್ರಭು ಪ್ರಿಯ ಮತ್ತು ಪರಿವಾರದ ಪ್ರಿಯವೂ ಆಗುವ ಅವಶ್ಯಕತೆಯಿದೆ.

ಇಂದು ಬಾಪ್‌ದಾದಾರವರು ಸರ್ವಮಕ್ಕಳ ಬ್ರಾಹ್ಮಣ ಜೀವನದ ಅಡಿಪಾಯ(ಫೌಂಡೇಶನ್)ವನ್ನು ನೋಡುತ್ತಿದ್ದಾರೆ. ಫೌಂಡೇಶನ್ ಆಗಿದೆ ನಿಶ್ಚಯಬುದ್ಧಿ. ಆದ್ದರಿಂದ ಎಲ್ಲಿ ನಿಶ್ಚಯಬುದ್ಧಿಯಿದೆಯೋ- ಪ್ರತಿಯೊಂದು ಸಂಕಲ್ಪದಲ್ಲಿ, ಪ್ರತಿಯೊಂದು ಕಾರ್ಯದಲ್ಲಿ ವಿಜಯವಿದ್ದೇ ಇದೆ. ಸಫಲತೆಯು ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ತಾನಾಗಿಯೇ ಮತ್ತು ಸಹಜವಾಗಿ ಪ್ರಾಪ್ತಿಯಾಗುತ್ತದೆ. ಜನ್ಮಸಿದ್ಧ ಅಧಿಕಾರಕ್ಕಾಗಿ ಕಷ್ಟಪಡುವ ಅವಶ್ಯಕತೆಯಿಲ್ಲ. ಸಫಲತೆ ಬ್ರಾಹ್ಮಣ ಜೀವನದ ಕೊರಳಿನ ಹಾರವಾಗಿದೆ. ಬ್ರಾಹ್ಮಣ ಜೀವನ ಸಫಲತಾಸ್ವರೂಪವಾಗಿಯೇ ಇದೆ. ಸಫಲತೆಯು ಆಗುತ್ತದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆಯು ಬ್ರಾಹ್ಮಣ ಜೀವನದಲ್ಲಿ ಇಲ್ಲವೇ ಇಲ್ಲ. ನಿಶ್ಚಯ ಬುದ್ಧಿ ಆತ್ಮರು ಸದಾ ತಂದೆಯ ಜೊತೆ ಕಂಬೈಂಡ್ ಆಗಿಯೇ ಇರುತ್ತಾರೆ. ಎಲ್ಲಿ ತಂದೆಯು ಕಂಬೈಂಡ್ ಆಗಿದ್ದಾರೆಯೋ ಅಲ್ಲಿ ಸಫಲತೆಯು ಸದಾ ಪ್ರಾಪ್ತಿ ಆಗುತ್ತದೆ. ಆದ್ದರಿಂದ ಪರಿಶೀಲನೆ ಮಾಡಿಕೊಳ್ಳಿರಿ - ಎಷ್ಟರ ಮಟ್ಟಿಗೆ ಸಫಲತಾ ಸ್ವರೂಪವಾಗಿದ್ದೇನೆ? ಒಂದುವೇಳೆ ಸಫಲತೆಯಲ್ಲಿ ಪರ್ಸೆಂಟೇಜ್ ಇದ್ದರೆ ಅದಕ್ಕೆ ಕಾರಣ ನಿಶ್ಚಯದಲ್ಲಿ ಪರ್ಸೆಂಟೇಜ್ ಇದ್ದ ಹಾಗೆ. ನಿಶ್ಚಯ ಕೇವಲ ತಂದೆಯ ಮೇಲೆ ಇದೆ. ಇದಂತೂ ಬಹಳ ಒಳ್ಳೆಯದು. ಆದರೆ ನಿಶ್ಚಯ - ತಂದೆಯ ಮೇಲೆ ನಿಶ್ಚಯ, ಸ್ವಯಂನ ಮೇಲೆ ನಿಶ್ಚಯ, ಡ್ರಾಮಾದ ಮೇಲೆ ನಿಶ್ಚಯ ಜೊತೆ ಜೊತೆಗೆ ಪರಿವಾರದ ಮೇಲೂ ನಿಶ್ಚಯ. ಈ ನಾಲ್ಕೂ ಪ್ರಕಾರದ ನಿಶ್ಚಯದ ಆಧಾರದಿಂದ ಸಫಲತೆ ಸಹಜ ಮತ್ತು ಸ್ವತಃವಾಗಿಯೇ ಲಭಿಸುತ್ತದೆ.

ತಂದೆಯ ಮೇಲೆ ಎಲ್ಲಾ ಮಕ್ಕಳಿಗೂ ನಿಶ್ಚಯವಿದೆ. ಆದ್ದರಿಂದಲೇ ಇಲ್ಲಿಗೆ ಬಂದಿದ್ದೀರಿ. ತಂದೆಗೂ ಸಹ ತಮ್ಮೆಲ್ಲರ ಮೇಲೆ ನಿಶ್ಚಯವಿದೆ ಆದ್ದರಿಂದ ತನ್ನವರನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಬ್ರಾಹ್ಮಣ ಜೀವನದಲ್ಲಿ ಸಂಪನ್ನ ಅಥವಾ ಸಂಪೂರ್ಣರಾಗಲು ಸ್ವಯಂನಲ್ಲೂ ಸಹ ನಿಶ್ಚಯ ಅವಶ್ಯಕವಾಗಿದೆ. ಬಾಪ್‌ದಾದಾರವರ ಮೂಲಕ ಪ್ರಾಪ್ತಿಯಾದ ಶ್ರೇಷ್ಠ ಆತ್ಮನ ಸ್ವಮಾನ ಸದಾ ಸ್ಮೃತಿಯಲ್ಲಿರಲಿ. ನಾನು ಪರಮಾತ್ಮನ ಮೂಲಕ ಸ್ವಮಾನಧಾರಿ, ಶ್ರೇಷ್ಠ ಆತ್ಮನಾಗಿದ್ದೇನೆ. ಸಾಧಾರಣ ಆತ್ಮನಲ್ಲ, ಪರಮಾತ್ಮ ಸ್ವಮಾನಧಾರಿ ಆತ್ಮ. ಪ್ರತಿಯೊಂದು ಸಂಕಲ್ಪ, ಪ್ರತಿಯೊಂದು ಕರ್ಮದಲ್ಲಿ ಸಮಾನವಿದ್ದಾಗ ತಪ್ಪದೇ ಸಫಲತೆ ಲಭಿಸುತ್ತದೆ. ಸಾಧಾರಣ ಕರ್ಮ ಮಾಡುವ ಆತ್ಮನಲ್ಲ , ಸ್ವಮಾನಧಾರಿ ಆತ್ಮನಾಗಿದ್ದೇನೆ ಅಂದಾಗ ಪ್ರತಿಯೊಂದು ಕರ್ಮದಲ್ಲಿ ಸ್ವಮಾನ ತಮಗೆ ಸಫಲತೆಯನ್ನು ಸಹಜವಾಗಿ ನೀಡುತ್ತದೆ. ಸ್ವಯಂನಲ್ಲಿ ನಿಶ್ಚಯದ ಚಿಹ್ನೆಯಾಗಿದೆ - ಸಫಲತೆ ಅಥವಾ ವಿಜಯ. ಹಾಗೆಯೇ ತಂದೆಯಲ್ಲೂ ಸಹ ಪಕ್ಕಾ ನಿಶ್ಚಯವಿದ್ದರೆ ಅದರ ವಿಶೇಷತೆಯಾಗಿದೆ - ನಿರಂತರ ನಾನು ತಂದೆಯವನು ಮತ್ತು ತಂದೆ ನನ್ನವರು. ಇದು ನಿರಂತರ ವಿಜಯದ ಆಧಾರವಾಗಿದೆ. ನನ್ನ ಬಾಬಾ ಕೇವಲ ಬಾಬಾ ಅಲ್ಲ, ನನ್ನ ಬಾಬಾ. ನನ್ನದರ ಮೇಲೆ ಅಧಿಕಾರವಿರುತ್ತದೆ ಅಂದಾಗ ನನ್ನ ಬಾಬಾ, ನಿಶ್ಚಯಬುದ್ಧಿ ಆತ್ಮ ಸದಾ ಸಫಲತೆಯ, ವಿಜಯದ ಅಧಿಕಾರಿಯಾಗಿದ್ದಾರೆ. ಹಾಗೆಯೇ ಡ್ರಾಮಾದಲ್ಲಿಯೂ ಸಹ ಸಂಪೂರ್ಣ ನಿಶ್ಚಯವಿರಬೇಕು. ಸಫಲತೆ ಮತ್ತು ಸಮಸ್ಯೆ ಎರಡೂ ಪ್ರಕಾರದ ಮಾತು ಡ್ರಾಮಾದಲ್ಲಿ ಬರುತ್ತವೆ. ಆದರೆ ಸಮಸ್ಯೆಯ ಸಮಯದಲ್ಲಿ ನಿಶ್ಚಯಬುದ್ಧಿಯ ಗುರುತಾಗಿದೆ - ಸಮಾಧಾನ ಸ್ವರೂಪರಾಗಿರುವುದು. ಸಮಸ್ಯೆಯನ್ನು ಸೆಕೆಂಡ್ನಲ್ಲಿ ಸಮಾಧಾನ ಸ್ವರೂಪದ ಮೂಲಕ ಪರಿವರ್ತನೆ ಮಾಡಿಕೊಳ್ಳುವುದು. ಸಮಸ್ಯೆಯ ಕೆಲಸವಾಗಿದೆ ಬರುವುದು,

ನಿಶ್ಚಯಬುದ್ಧಿಯ ಆತ್ಮನ ಕೆಲಸವಾಗಿದೆ ಸಮಾಧಾನ ಸ್ವರೂಪದಿಂದ ಪರಿವರ್ತನೆ ಮಾಡುವುದು. ಏಕೆ? ತಾವು ಪ್ರತಿಯೊಬ್ಬ ಆತ್ಮನ ಬಗ್ಗೆ ಬ್ರಾಹ್ಮಣ ಜನ್ಮವನ್ನು ಪಡೆದುಕೊಳ್ಳುತ್ತಲೇ ಚಾಲೆಂಜ್ ಮಾಡಿದ್ದೀರಿ. ಮಾಯಾಜೀತರಾಗುತ್ತೇವೆಂದು ಮಾಡಿದ್ದೀರಲ್ಲವೇ ಅಥವಾ ಮರೆತುಬಿಟ್ಟಿದ್ದೀರೋ? ಸಮಸ್ಯೆಯು ಮಾಯೆಯ ಸ್ವರೂಪವಾಗಿದೆ. ಚಾಲೆಂಜ್ ಮಾಡಿದಾಗ ಮಾಯೆಯು ಎದುರಿಸುವುದಕ್ಕೆ ಬರುತ್ತದೆಯಲ್ಲವೆ! ಅದು ಭಿನ್ನ-ಭಿನ್ನ ಸಮಸ್ಯೆಯ ರೂಪದಲ್ಲಿ ನಿಮ್ಮ ಚಾಲೆಂಜನ್ನು ಪೂರ್ಣ ಮಾಡಲು ಬರುತ್ತದೆ. ತಾವು ನಿಶ್ಚಯಬುದ್ಧಿ, ವಿಜಯೀ ಸ್ವರೂಪದಿಂದ ಪಾರು ಮಾಡಬೇಕು, ಏಕೆ? ಇದು ಹೊಸದೇನಲ್ಲ (ನತಿಂಗ್ ನ್ಯೂ). ಎಷ್ಟು ಬಾರಿ ವಿಜಯಿಯಾಗಿದ್ದೀರಿ. ಈಗ ಮೊದಲನೇ ಸಾರಿ ಸಂಗಮದಲ್ಲಿ ವಿಜಯಿಗಳಾಗಿದ್ದೀರೋ ಅಥವಾ ಅನೇಕ ಬಾರಿ ಆಗಿದ್ದೀರೋ, ಅದನ್ನು ರಿಪೀಟ್ ಮಾಡಿದ್ದೀರಾ? ಆದ್ದರಿಂದ ಸಮಸ್ಯೆ ನಿಮಗೇನೂ ಹೊಸದೇನಲ್ಲ, ನಥಿಂಗ್ ನ್ಯೂ. ಅನೇಕ ಬಾರಿ ವಿಜಯಿಗಳಾಗಿದ್ದೀರಿ. ಆಗುತ್ತಿದ್ದೀರಿ ಮತ್ತು ಮುಂದೆಯೂ ಸಹ ಆಗುತ್ತೀರಿ. ಇದಾಗಿದೆ ಡ್ರಾಮಾದ ಮೇಲೆ ನಿಶ್ಚಯಬುದ್ಧಿ ವಿಜಯಿ. ಉಳಿದದ್ದು - ಬ್ರಾಹ್ಮಣ ಪರಿವಾರದಲ್ಲಿ ನಿಶ್ಚಯ, ಏಕೆ? ಬ್ರಾಹ್ಮಣ ಪರಿವಾರದ ಅರ್ಥವೇ ಆಗಿದೆ ಸಂಘಟನೆ. ಚಿಕ್ಕ ಪರಿವಾರವಲ್ಲ, ಬ್ರಹ್ಮಾತಂದೆಯ ಬ್ರಾಹ್ಮಣ ಪರಿವಾರ ಎಲ್ಲಾ ಪರಿವಾರಕ್ಕಿಂತ ಶ್ರೇಷ್ಠ ಮತ್ತು ದೊಡ್ಡದಾಗಿದೆ. ಅಂದಾಗ ಪರಿವಾರದ ಮಧ್ಯದಲ್ಲಿ, ಪರಿವಾರದ ಪ್ರೀತಿ ಮತ್ತು ಪ್ರೀತಿಯನ್ನು ನಿಭಾಯಿಸುವಂತಹ ವಿಜಯಿಯಾಗಬೇಕು. ತಂದೆಯು ನನ್ನವರು, ನಾನು ತಂದೆಯವನು, ಎಲ್ಲವೂ ಮುಗಿಯಿತು. ತಂದೆಯ ಜೊತೆ ಕೆಲಸವಿದೆ ಆದರೆ ಪರಿವಾರದ ಜೊತೆ ಕೆಲಸವೇನಿದೆ ಎಂದು ಭಾವಿಸಬಾರದು. ಇದೂ ಸಹ ನಿಶ್ಚಯದ ವಿಶೇಷತೆಯಾಗಿದೆ. ನಾಲ್ಕೂ ಮಾತಿನ ನಿಶ್ಚಯದಲ್ಲಿ ವಿಜಯದ ಅವಶ್ಯಕತೆಯಿದೆ. ಪರಿವಾರವೂ ಸಹ ಎಲ್ಲರನ್ನು ಕೆಲವು ಮಾತುಗಳಲ್ಲಿ ಶಕ್ತಿಶಾಲಿಗಳನ್ನಾಗಿ ಮಾಡುತ್ತದೆ. ಕೇವಲ ಪರಿವಾರದಲ್ಲಿ ಎಲ್ಲರೂ ತಮ್ಮ ತಮ್ಮ ನಂಬರನ್ನು ಅನುಸರಿಸಿ ಧಾರಣಾ ಸ್ವರೂಪರಾಗಿದ್ದಾರೆ ಎಂಬ ಸ್ಮೃತಿಯಿರಲಿ. ವಿವಿಧತೆಯಿದೆ. ಇದರ ಸ್ಮೃತೀಚಿಹ್ನೆಯಾಗಿ 108ರ ಮಾಲೆಯಿದೆ. ಯೋಚಿಸಿ - ಮೊದಲನೆಯ ನಂಬರ್ ಎಲ್ಲಿ, 108ನೇ ನಂಬರ್ ಎಲ್ಲಿ, ಈ ರೀತಿ ಏಕೆ ಆಯಿತು? ಎಲ್ಲರೂ ಮೊದಲನೆ ನಂಬರ್ ಏಕೆ ಆಗಲಿಲ್ಲ? 16000 ಏಕೆ ಆದರು? ಕಾರಣ? ವಿವಿಧ ಸಂಸ್ಕಾರವನ್ನು ತಿಳಿದು ಜ್ಞಾನಪೂರ್ಣರಾಗಿ ನಡೆಯಬೇಕು, ನಿಭಾಯಿಸಬೇಕು. ಇದೇ ಸಫಲತಾಪೂರ್ಣ ಸ್ಥಿತಿಯಾಗಿದೆ, ನಡೆಯಲೇಬೇಕಾಗುತ್ತದೆ. ಪರಿವಾರವನ್ನು ಬಿಟ್ಟು ಎಲ್ಲಿಗೆ ಹೋಗುತ್ತೀರಿ. ನಮ್ಮದು ಎಷ್ಟೊಂದು ದೊಡ್ಡ ಪರಿವಾರವಿದೆ ಎಂದು ನಶೆಯೂ ಸಹ ಇದೆಯಲ್ಲವೆ. ವಿಶಾಲ ಪರಿವಾರದಲ್ಲಿ ವಿಶಾಲ ಹೃದಯದಿಂದ ಪ್ರತಿಯೊಬ್ಬರ ಸಂಸ್ಕಾರವನ್ನು ತಿಳಿದೂ ನಡೆಯುವುದು, ನಿರ್ಮಾಣರಾಗಿ ನಡೆಯುವುದು, ಶುಭಭಾವನೆ, ಶುಭಕಾಮನೆಯ ವೃತ್ತಿಯಿಂದ ನಡೆಯುವುದು... ಇದೇ ಪರಿವಾರದ ಮೇಲಿನ ನಿಶ್ಚಯಬುದ್ಧಿ, ವಿಜಯದ ಗುರುತಾಗಿದೆ. ಅಂದಾಗ ಎಲ್ಲರೂ ವಿಜಯಿಗಳಾಗಿದ್ದೀರಲ್ಲವೇ?

ಡಬಲ್ ವಿದೇಶಿಗಳು ವಿಜಯಿಯಾಗಿದ್ದೀರಾ? ಕೈಯಂತೂ ಬಹಳ ಚೆನ್ನಾಗಿ ಅಲುಗಾಡಿಸುತ್ತೀರಿ. ಬಹಳ ಒಳ್ಳೆಯದು. ಬಾಪ್‌ದಾದಾರವರಿಗೆ ಖುಷಿಯಿದೆ. ಒಳ್ಳೆಯದು. ಶಿಕ್ಷಕಿಯರು ವಿಜಯಿಗಳಾಗಿದ್ದೀರಾ? ಅಥವಾ ಅಲ್ಪಸ್ವಲ್ಪ ಆಗುತ್ತದೆಯೋ? ಏನು ಮಾಡಲಿ, ಇದಂತೂ ಇಲ್ಲವೇ! ಹೇಗೆ ಎಂಬ ಶಬ್ದದ ಬದಲಾಗಿ ಹೀಗೆ ಎಂಬ ಶಬ್ದವನ್ನು ಉಪಯೋಗಿಸಿ, ಹೇಗೆ ಮಾಡಲಿ ಅಲ್ಲ ಹೀಗೆ ಮಾಡುವುದು. 21 ಜನ್ಮದ ಸಂಬಂಧ ಪರಿವಾರದ ಜೊತೆಯಿದೆ. ಆದ್ದರಿಂದ ಯಾರು ಪರಿವಾರದಲ್ಲಿ ಉತ್ತೀರ್ಣರಾಗುತ್ತಾರೆಯೋ ಅವರು ಎಲ್ಲದರಲ್ಲೂ ಉತ್ತೀರ್ಣರಾಗುತ್ತಾರೆ.

ಅಂದಾಗ ನಾಲ್ಕೂ ಪ್ರಕಾರದ ನಿಶ್ಚಯವನ್ನು ಚೆಕ್ ಮಾಡಿಕೊಳ್ಳಿ ಏಕೆಂದರೆ ಪ್ರಭುಪ್ರಿಯರ ಜೊತೆಗೆ ಪರಿವಾರದ ಪ್ರಿಯರೂ ಆಗಬೇಕು. ಇದು ಅತೀ ಅವಶ್ಯಕವಾಗಿದೆ. ಅಂಕಗಳು ಈ ನಾಲ್ಕೂ ಪ್ರಕಾರದ ನಿಶ್ಚಯದ ಪರ್ಸೆಂಟೇಜ್ ನ ಅನುಸಾರ ಸಿಗುತ್ತವೆ. ನಾನು ಬಾಬಾನವನು, ಬಾಬಾ ನನ್ನವರು, ಆಯಿತು ಈ ರೀತಿಯಲ್ಲ. ನನ್ನ ಬಾಬಾ ಎಂದು ಬಹಳ ಚೆನ್ನಾಗಿ ಹೇಳುತ್ತೀರಿ ಮತ್ತು ಸದಾ ಈ ನಿಶ್ಚಯದಲ್ಲಿ ಸ್ಥಿರವಾಗಿದ್ದೀರಿ, ಇದಕ್ಕಾಗಿ ಅಭಿನಂದನೆಗಳು, ಆದರೆ ಇನ್ನೂ ಮೂರು ಉಳಿದಿವೆ. ಟೀಚರ್ಸ್, ನಾಲ್ಕರ ಅವಶ್ಯಕತೆಯಿದೆಯೇ? ಅಥವಾ ಮೂರರ ಅವಶ್ಯಕತೆಯಿದೆ ಒಂದರ ಅವಶ್ಯಕತೆ ಇಲ್ಲವೋ? ನಾಲ್ಕೂ ಪ್ರಕಾರದ ನಿಶ್ಚಯದ ಅವಶ್ಯಕತೆಯಿದೆ ಎಂದು ತಿಳಿಯುವವರು ಕೈಯನ್ನು ಎತ್ತಿರಿ. ಎಲ್ಲರಿಗೂ ನಾಲ್ಕೂ ವಿಷಯಗಳ ಬಗ್ಗೆ ಇಷ್ಟವಿದೆಯೇ? ಯಾರಿಗೆ ಮೂರು ವಿಷಯಗಳಲ್ಲಿ ನಿಶ್ಚಯವಿದೆಯೋ ಅವರು ಕೈಯನ್ನು ಎತ್ತಿರಿ. ಯಾರೂ ಇಲ್ಲ. ನಿಭಾಯಿಸಲು ಕಷ್ಟವಾಗುವುದಿಲ್ಲವೆ? ಬಹಳ ಒಳ್ಳೆಯದು. ಒಂದುವೇಳೆ ಮನಃಪೂರ್ವಕವಾಗಿ ಕೈಯನ್ನು ಎತ್ತಿದ್ದರೆ ಎಲ್ಲರೂ ಪಾಸ್ ಆಗಿದ್ದೀರಿ, ಒಳ್ಳೆಯದು.

ನೋಡಿ, ಎಲ್ಲೆಲ್ಲಿಂದ ಬಂದಿರುವ ಭಿನ್ನ ಭಿನ್ನ ದೇಶದ ಕೊಂಬೆಗಳು ಮಧುಬನದಲ್ಲಿ ಒಂದು ವೃಕ್ಷವಾಗಿದ್ದೀರಿ. ಮಧುಬನದಲ್ಲಿದ್ದಾಗ ನಾನು ದೆಹಲಿಯವನು, ನಾನು ಕರ್ನಾಟಕದವನು, ನಾನು ಗುಜರಾತಿನವನು ಎಂದು ನೆನಪಿರುತ್ತದೆಯೇ? ಎಲ್ಲರೂ ಮಧುಬನ ನಿವಾಸಿಗಳೇ ಆಗಿದ್ದೀರಿ. ಅಂದಾಗ ಒಂದೇ ವೃಕ್ಷವಾಯಿತಲ್ಲವೇ. ಈ ಸಮಯದಲ್ಲಿ ಎಲ್ಲರೂ ಏನೆಂದು ತಿಳಿದುಕೊಂಡಿದ್ದೀರಿ, ಮಧುಬನ ನಿವಾಸಿಗಳಾಗಿದ್ದೀರೆಂದೇ ಅಥವಾ ತಮ್ಮ ತಮ್ಮ ದೇಶದ ನಿವಾಸಿಗಳಾಗಿದ್ದೀರಾ, ಮಧುಬನ ನಿವಾಸಿಗಳಾಗಿದ್ದೀರಾ? ಎಲ್ಲರೂ ಮಧುಬನ ನಿವಾಸಿಗಳೇ, ಬಹಳ ಒಳ್ಳೆಯದು. ಪ್ರತಿಯೊಬ್ಬ ಬ್ರಾಹ್ಮಣನ ಸ್ಥಿರವಾದ ವಿಳಾಸ ಮಧುಬನವೇ ಆಗಿದೆ. ತಮ್ಮ ಸ್ಥಿರವಾದ ವಿಳಾಸ ಯಾವುದಾಗಿದೆ? ಬಾಂಬೆಯಾಗಿದೆಯೇ? ದೆಹಲಿಯಾಗಿದೆಯೇ? ಪಂಜಾಬ್ ಆಗಿದೆಯೇ? ಮಧುಬನ ಸ್ಥಿರವಾದ ವಿಳಾಸವಾಗಿದೆ. ಎಲ್ಲರನ್ನು ಸೇವೆಗೋಸ್ಕರ ಸೇವಾಕೇಂದ್ರಗಳಿಗೆ ಕಳುಹಿಸಲಾಗಿದೆ. ಅದು ಸೇವಾಸ್ಥಾನವಾಗಿದೆ. ಮಧುಬನವು ತಮ್ಮ ಮನೆಯಾಗಿದೆ. ಕೊನೆಗೆ ಆಶ್ರಯ ಎಲ್ಲಿ ಸಿಗುತ್ತದೆ? ಮಧುಬನವೇ ಆಗಿದೆಯಲ್ಲವೆ. ಆದ್ದರಿಂದ ದೊಡ್ಡ ದೊಡ್ಡ ಸ್ಥಾನಗಳು ಮಾಡಲ್ಪಟ್ಟಿವೆ!

ತಂದೆಯ ಸಮಾನರಾಗುವುದು ಎಲ್ಲರ ಲಕ್ಷ್ಯವಾಗಿದೆ. ಇಡೀ ದಿನ ಮನಸ್ಸಿನ ಡ್ರಿಲ್‌ಅನ್ನು ಮಾಡಬೇಕು. **ಶರೀರದ ಡ್ರಿಲ್ ಮಾಡಿದಾಗ ಶಾರೀರಿಕ ಆರೋಗ್ಯವು ಸಿಗುತ್ತದೆ ಏಕೆಂದರೆ ಇಂದಿನ ದಿನಗಳಲ್ಲಿ ಔಷಧಿಗಳಿಗಿಂತಲೂ ವ್ಯಾಯಾಮದ ಅವಶ್ಯಕತೆಯಿದೆ. ಅದನ್ನು ಆ ಸಮಯದಲ್ಲಿ ವೇಗವಾಗಿ ಮಾಡಬೇಕು. ಸೇವೆಯ ಸಮಯದಲ್ಲಿ ವ್ಯಾಯಾಮ ಮಾಡಬಾರದು. ಬಾಕಿ ಸಮಯದಲ್ಲಿ ವ್ಯಾಯಾಮ ಮಾಡುವುದು ಒಳ್ಳೆಯದು ಆದರೆ ಜೊತೆಜೊತೆಗೆ ಮನಸ್ಸಿನ ವ್ಯಾಯಾಮವನ್ನು ಪದೇ ಪದೇ ಮಾಡಬೇಕು. ತಂದೆಯ ಸಮಾನವಾಗಬೇಕಾದರೆ ಒಂದು ನಿರಾಕಾರಸ್ಥಿತಿ, ಮತ್ತೊಂದು ಅವ್ಯಕ್ತ ಫರಿಶ್ತಾ ಸ್ಥಿತಿಯಾಗಿದೆ. ಅಂದಾಗ ಸಮಯ ಸಿಕ್ಕಾಗಲೆಲ್ಲಾ ಸೆಕೆಂಡಿನಲ್ಲಿ ತಂದೆಯ ಸಮಾನ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಬೇಕು, ತಂದೆಯ ಸಮಾನವಾಗಬೇಕಾದರೆ ನಿರಾಕಾರಿ ಸ್ಥಿತಿಯೇ ತಂದೆಯ ಸಮಾನವಾಗಿದೆ. ಕಾರ್ಯವನ್ನು ಮಾಡುತ್ತಾ ಫರಿಶ್ತಾಗಳಾಗಿ ಕರ್ಮವನ್ನು ಮಾಡಿ. ಫರಿಸ್ತಾ ಅರ್ಥಾತ್ ಡಬಲ್ಲೈಟ್. ಕಾರ್ಯದ ಹೊರೆಯಿರುವುದಿಲ್ಲ. ಕಾರ್ಯದ ಹೊರೆಯು ಅವ್ಯಕ್ತ ಫರಿಶ್ತೆಗಳಾಗಲು ಬಿಡುವುದಿಲ್ಲ. ಅಂದಾಗ ಮಧ್ಯ ಮಧ್ಯದಲ್ಲಿ ನಿರಾಕಾರಿ ಮತ್ತು ಫರಿಶ್ತಾ**

**ಸ್ವರೂಪದ ಮನಸ್ಸಿನ ವ್ಯಾಯಾಮವನ್ನು ಮಾಡಿದಾಗ ಸುಸ್ತಾಗುವುದಿಲ್ಲ. ಹೇಗೆ ಬ್ರಹ್ಮಾ ತಂದೆಯನ್ನು ಸಾಕಾರ ರೂಪದಲ್ಲಿ ಡಬಲ್ಲೈಟ್ ಆಗಿ ನೋಡಿದಿರಿ. ಅವರಿಗೆ ಸೇವೆಯ ಹೊರೆಯಿರಲಿಲ್ಲ. ಅವ್ಯಕ್ತ ಫರಿಶ್ತಾರೂಪ, ಆದ್ದರಿಂದಲೇ ಸಹಜವಾಗಿ ತಂದೆಯ ಸಮಾನವಾದರು.** ಆತ್ಮವೂ ಸಹ ನಿರಾಕಾರಿಯಾಗಿದೆ ಮತ್ತು ಆತ್ಮ ನಿರಾಕಾರ ಸ್ಥಿತಿಯಲ್ಲಿ ಸ್ಥಿತವಾದಾಗ ನಿರಾಕಾರ ತಂದೆಯ ನೆನಪು ಸಹಜವಾಗಿ ಸಮಾನರನ್ನಾಗಿ ಮಾಡುತ್ತದೆ. ಈಗೀಗ ಒಂದು ಸೆಕೆಂಡಿನಲ್ಲಿ ನಿರಾಕಾರ ಸ್ಥಿತಿಯಲ್ಲಿ ಸ್ಥಿತರಾಗುತ್ತೀರಾ? ಆಗುತ್ತದೆಯೇ? (ಬಾಪ್‌ದಾದಾ ಡ್ರಿಲ್ ಮಾಡಿಸಿದರು) ಈ ಅಭ್ಯಾಸ ಮತ್ತು ಗಮನ ನಡೆಯುತ್ತಾ, ತಿರುಗಾಡುತ್ತಾ, ಕರ್ಮ ಮಾಡುತ್ತಾ ಮಧ್ಯ ಮಧ್ಯದಲ್ಲಿ ಮಾಡುತ್ತಿರಬೇಕು. ಆಗ ಈ ಅಭ್ಯಾಸ ಮನಸಾ ಸೇವೆಯನ್ನು ಮಾಡುವುದರಲ್ಲಿ ಸಹಯೋಗವನ್ನು ಕೊಡುತ್ತದೆ ಮತ್ತು ಶಕ್ತಿಶಾಲಿ ಯೋಗದ ಸ್ಥಿತಿಯಲ್ಲಿರಲು ಬಹಳ ಸಹಯೋಗ ಸಿಗುತ್ತದೆ. ಒಳ್ಳೆಯದು.

ಡಬಲ್ ವಿದೇಶಿಯರೊಂದಿಗೆ - ನೋಡಿ ಡಬಲ್ ವಿದೇಶಿಯರಿಗೆ ಈ ಸೀಜನ್ನಲ್ಲಿ ಕಾರಣವಾಗಿಯೋ ಅಥವಾ ಅಕಾರಣವಾಗಿಯೋ ಎಲ್ಲಾ ಗ್ರೂಪ್ನಲ್ಲಿಯೂ ಅವಕಾಶ ಸಿಕ್ಕಿದೆ. ಪ್ರತಿಯೊಂದು ಗ್ರೂಪ್ನಲ್ಲೂ ಸಹ ಬರುವುದಕ್ಕೆ ಸ್ವತಂತ್ರತೆಯಿದೆ. ಅಂದಾಗ ಇದು ಭಾಗ್ಯವಲ್ಲವೇ, ಡಬಲ್ ಭಾಗ್ಯವಾಗಿದೆ. ಬಾಪ್‌ದಾದಾ ನೋಡುತ್ತಿದ್ದಾರೆ. ಈ ಗ್ರೂಪ್ನಲ್ಲಿಯೂ ಸಹ ಕೆಲವರು ಮೊದಲನೇ ಬಾರಿ ಬಂದಿದ್ದಾರೆ, ಕೆಲವರು ಮುಂಚೆಯೇ ಬಂದಿದ್ದಾರೆ. ಬಾಪ್‌ದಾದಾರವರ ದೃಷ್ಟಿ ಎಲ್ಲಾ ವಿದೇಶಿಗಳ ಮೇಲಿದೆ. ನಿಮಗೆ ಎಷ್ಟು ತಂದೆಯ ಮೇಲೆ ಪ್ರೀತಿಯಿದೆ, ನಿಮಗಿಂತಲೂ ಪದಮಗುಣದಷ್ಟು ತಂದೆಗೆ ಪ್ರೀತಿಯಿದೆ. ಸರಿಯಾಗಿದೆಯಲ್ಲವೇ! ಪದಮಗುಣವಾಗಿದೆಯೇ? ನಿಮ್ಮದೂ ಪ್ರೀತಿಯಿದೆ, ನಿಮ್ಮ ಪ್ರೀತಿ ಮನಸ್ಸಿನ ಪ್ರೀತಿಯಾಗಿದೆ. ಆದ್ದರಿಂದ ಬಂದು ತಲುಪಿದ್ದೀರಿ. ಡಬಲ್ ವಿದೇಶಿಗಳು ಈ ಬ್ರಾಹ್ಮಣ ಪರಿವಾರದ ಶೃಂಗಾರವಾಗಿದ್ದಾರೆ. ವಿಶೇಷವಾಗಿ ಶೃಂಗಾರವಾಗಿದ್ದೀರಿ. ಪ್ರತಿಯೊಂದು ದೇಶವನ್ನು ಬಾಪ್‌ದಾದಾ ನೋಡುತ್ತಿದ್ದಾರೆ - ಸ್ಮೃತಿಯಲ್ಲಿಯೇ ಕುಳಿತಿದ್ದಾರೆ. ಕೇಳುತ್ತಿದ್ದರೂ ಸ್ಮೃತಿಯಲ್ಲಿಯೇ ಕುಳಿತುಕೊಂಡಿದ್ದಾರೆ. ಬಹಳ ಒಳ್ಳೆಯದು.

ಶಿಕ್ಷಕಿಯರು: ಶಿಕ್ಷಕಿಯರ ಗುಂಪು ಬಹಳ ದೊಡ್ಡದಿದೆ. ಬಾಪ್‌ದಾದಾ ಶಿಕ್ಷಕಿಯರಿಗೆ ಒಂದು ಬಿರುದನ್ನು ಕೊಡುತ್ತಾರೆ. ಅದು ಯಾವ ಬಿರುದಾಗಿದೆ? ಸ್ನೇಹಿತರಂತೂ ಎಲ್ಲರೂ ಆಗಿದ್ದೀರಿ. ಡಬಲ್ ವಿದೇಶಿಗಳಂತೂ ಮೊದಲೇ ಸ್ನೇಹಿಗಳಾಗಿದ್ದಾರೆ. ಅವರಿಗೆ ಸ್ನೇಹಿತರ ಸಂಬಂಧ ಇಷ್ಟವಾಗುತ್ತದೆ. ಶಿಕ್ಷಕಿಯರಿಗೆ ಬಾಪ್‌ದಾದಾ ಯಾರು ಯೋಗ್ಯವಾದ ಶಿಕ್ಷಕಿಯರಾಗಿದ್ದಾರೆ. ಎಲ್ಲರಿಗೂ ಸಹ ಅಲ್ಲ. ಯಾರು ಯೋಗ್ಯವಾಗಿದ್ದಾರೆಯೋ ಅವರಿಗೆ ಬಾಪ್‌ದಾದಾ ಹೇಳುತ್ತಾರೆ - ಇವರು ಗುರು, ಸಹೋದರ ಆಗಿದ್ದಾರೆ. ಹೇಗೆ ದೊಡ್ಡ ಮಕ್ಕಳು ತಂದೆಯ ಸಮಾನವಾಗುತ್ತಾರಲ್ಲವೇ, ಹಾಗೆಯೇ ಶಿಕ್ಷಕಿಯರೂ ಸಹ ಗುರು, ಸಹೋದರ ಆಗಿದ್ದಾರೆ ಏಕೆಂದರೆ ಸದಾ ತಂದೆಯ ಸೇವೆಯಲ್ಲಿ ನಿಮಿತ್ತರಾಗಿರುತ್ತಾರೆ. ತಂದೆಯ ಸಮಾನ ಸೇವಾಧಾರಿಯಾಗಿದ್ದಾರೆ. ನೋಡಿ, ಶಿಕ್ಷಕಿಯರಿಗೆ ತಂದೆಯ ಸಿಂಹಾಸನ ಮುರಳಿಯನ್ನು ನುಡಿಸಲು ಸಿಗುತ್ತದೆ. ಗುರುವಿನ ಗದ್ದಿಯು ಸಿಕ್ಕಿದೆಯಲ್ಲವೆ! ಆದ್ದರಿಂದ ಶಿಕ್ಷಕಿ ಅರ್ಥಾತ್ ನಿರಂತರ ಸೇವಾಧಾರಿಯಾಗಿದ್ದಾರೆ. ಅವರು ಮನಸಾ-ವಾಚಾ ಅಥವಾ ಸಂಬಂಧ-ಸಂಪರ್ಕದ ಮುಖಾಂತರ ಕರ್ಮಣಾ ಸದಾ ಸೇವಾಧಾರಿ ಈ ರೀತಿ ಇದ್ದಿರಲ್ಲವೇ! ಆರಾಮ(ವಿಶ್ರಾಂತಿ) ಪ್ರಿಯರಾಗಬಾರದು. ಸೇವಾಧಾರಿ ಸೇವೆ, ಸೇವೆ ಮತ್ತು ಸೇವೆ. ಸರಿಯಾಗಿದೆಯಲ್ಲವೇ? ಒಳ್ಳೆಯದು.

ಸೇವಾಧಾರಿಗಳಲ್ಲಿ ದೆಹಲಿ, ಆಗ್ರಾದ ಟರ್ನ್ ಆಗಿದೆ: ಆಗ್ರಾ ಜೊತೆಗಾರ ಆಗಿದೆ ದೆಹಲಿಯ ಸೈನ್ಯ ಬಹಳ ದೊಡ್ಡದಾಗಿದೆ. ಒಳ್ಳೆಯದು. ದೆಹಲಿಯಲ್ಲಿ ಸ್ಥಾಪನೆಯ ಬುನಾದಿಯನ್ನು ಹಾಕಲಾಗಿದೆ. ಬಹಳ ಒಳ್ಳೆಯದು. ಈಗ ತಂದೆಯ ಪ್ರತ್ಯಕ್ಷತೆಯನ್ನು ಮಾಡಲು ಬುನಾದಿ ಎಲ್ಲಿಂದ ಹಾಕಲಾಗಿದೆ? ದೆಹಲಿಯಿಂದಲೋ ಅಥವಾ ಮಹಾರಾಷ್ಟ್ರದಿಂದಲೋ? ಕರ್ನಾಟಕದಿಂದಲೋ ಅಥವಾ ಲಂಡನ್ನಿಂದಲೋ? ಎಲ್ಲಿಂದ ಆಗುತ್ತದೆ? ದೆಹಲಿಯಿಂದ ಆಗುತ್ತದೆಯೇ? ನಿರಂತರ ಸೇವೆ ಮತ್ತು ತಪಸ್ಸನ್ನು ಮಾಡಿ. ಸೇವೆ ಮತ್ತು ತಪಸ್ಸು, ಈ ಎರಡರ ಬ್ಯಾಲೆನ್ಸ್ನಿಂದ ಆಗುತ್ತದೆ. ಹೇಗೆ ಸೇವೆಯ ಡೈಲಾಗ್ ಮಾಡಲಾಗಿದೆಯೋ ಹಾಗೆಯೇ ದೆಹಲಿಯಲ್ಲಿ ತಪಸ್ಸಿನ ವರ್ಣನೆ ಮಾಡುವ ಡೈಲಾಗ್ ಮಾಡಿದಾಗ ದೆಹಲಿ, ದೆಹಲಿ ಎಂದು ಹೇಳಲಾಗುತ್ತದೆ. ಮನಸ್ಸು ತಂದೆಯದಾಗಿದೆ ಆದರೆ ಕಾರ್ಯ ಮಾಡಿ ತೋರಿಸುವುದೇ ತಂದೆಯ ಮನಸ್ಸಿಗೆ ಪ್ರಿಯರಾಗುವುದಾಗಿದೆ. ಪಾಂಡವರು ಮಾಡಬೇಕಲ್ಲವೇ? ಮಾಡುತ್ತೀರಾ, ಆವಶ್ಯಕವಾಗಿ ಮಾಡುತ್ತೀರಾ. ಆ ರೀತಿ ತಪಸ್ಸನ್ನು ಮಾಡಬೇಕು. ಎಲ್ಲಾ ದೀಪದ ಹುಳುಗಳು ದೀಪದ ಹತ್ತಿರ ಬರುವಂತೆ ಬಾಬಾ, ಬಾಬಾ ಎಂದು ಹೇಳುತ್ತಾ ದೆಹಲಿಯ ವಿಶೇಷ ಸ್ಥಾನಕ್ಕೆ ತಲುಪಬೇಕು. ದೀಪದ ಹುಳುಗಳು ಬಾಬಾ, ಬಾಬಾ ಎಂದು ಹೇಳುತ್ತಾ ಬರಬೇಕು, ಆಗ ಪ್ರತ್ಯಕ್ಷತೆಯಾಗಿದೆ ಎಂದು ಹೇಳಲಾಗುತ್ತದೆ. ಅಂದಾಗ ಇದನ್ನು ಮಾಡಬೇಕು. ಮುಂದಿನ ವರ್ಷ ಇದನ್ನೇ ಮಾಡಬೇಕು ಮತ್ತು ಎಷ್ಟು ದೀಪದ ಹುಳುಗಳು ಬಾಬಾ, ಬಾಬಾ ಎಂದು ಸ್ವಾಹಾ ಆದರು ಎನ್ನುವ ಫಲಿತಾಂಶ ತಿಳಿಸಬೇಕಾಗಿದೆ. ಸರಿಯಾಗಿದೆಯಲ್ಲವೆ. ಬಹಳ ಒಳ್ಳೆಯದು. ಮಾತೆಯರೂ ಸಹ ಅನೇಕರಿದ್ದಾರೆ.

ಕುಮಾರ-ಕುಮಾರಿಯರು: ಕುಮಾರ ಮತ್ತು ಕುಮಾರಿಯರು ಅರ್ಧ ಹಾಲ್ನಲ್ಲಿ ಕುಮಾರ-ಕುಮಾರಿಯರೇ ಇದ್ದಾರೆ. ಶಹಭಾಸ್ ಕುಮಾರ-ಕುಮಾರಿಯರೇ, ಕುಮಾರ-ಕುಮಾರಿಯರು ಜ್ವಾಲಾರೂಪರಾಗಿ ಆತ್ಮರನ್ನು ಪಾವನರನ್ನಾಗಿ ಮಾಡಬೇಕು. ಇಂದಿನ ಕುಮಾರ-ಕುಮಾರಿಯರ ಮೇಲೆ ದಯೆ ಬರಬೇಕು ಏಕೆಂದರೆ ಅವರು ಎಷ್ಟೊಂದು ಅಲೆದಾಡುತ್ತಿದ್ದಾರೆ. ಅಲೆದಾಡುತ್ತಿರುವಂತಹ ಸಂಬಂಧಿಗಳಿಗೆ ಮಾರ್ಗವನ್ನು ತೋರಿಸಬೇಕಾಗಿದೆ. ಒಳ್ಳೆಯದು. ಈ ಇಡೀ ವರ್ಷದಲ್ಲಿ ಯಾರೆಲ್ಲಾ ಕುಮಾರ-ಕುಮಾರಿಯರು ಬಂದಿದ್ದೀರಿ, ನೀವು ಎಷ್ಟು ಆತ್ಮರನ್ನು ತಮ್ಮ ಸಮಾನ ತಯಾರು ಮಾಡಿಕೊಂಡಿದ್ದೀರಿ. ಅವರು ಕೈಯನ್ನು ಎತ್ತಿ. ಯಾರು ಸೇವೆಯಲ್ಲಿ ತಮ್ಮ ಸಮಾನ ಮಾಡಿಕೊಂಡಿದ್ದೀರೋ ಅವರು ದೊಡ್ಡದಾಗಿ ಕೈಯನ್ನು ಎತ್ತಬೇಕು. ಕುಮಾರಿಯರು ತಮ್ಮ ಸಮಾನ ತಯಾರು ಮಾಡಿಕೊಂಡಿದ್ದೀರಾ? ಒಳ್ಳೆಯ ಯೋಜನೆಯನ್ನು ಮಾಡುತ್ತಿದ್ದಾರೆ. ಹಾಸ್ಟೆಲ್ನಲ್ಲಿರುವಂತಹವರು ಕೈಯನ್ನು ಎತ್ತಿ. ಈಗ ಸೇವೆಯ ಪ್ರತ್ಯಕ್ಷ ಪ್ರಮಾಣವನ್ನು ತಂದಿಲ್ಲವೇ? ಅಂದಾಗ ಕುಮಾರ ಮತ್ತು ಕುಮಾರಿಯರು ಸೇವೆಯ ಪ್ರತ್ಯಕ್ಷ ಪ್ರಮಾಣವನ್ನು ತರಬೇಕು. ಸರಿಯೇ? ಅದರ್ ಕುಮಾರರ ಜೊತೆ: ಅಧರ್ ಕುಮಾರರು ಸಹ ಕಡಿಮೆಯೇನಲ್ಲ ಅದರ್ ಕುಮಾರರು ಸೇವೆಯ ನವೀನತೆಯನ್ನು ಹೇಗೆ ತೋರಿಸುತ್ತಾರೆ? ವಿಶ್ವದ ಮುಂದೆ ಪ್ರತಿಜ್ಞೆಯನ್ನು ಮಾಡಿ ತೋರಿಸಬೇಕು ಇಡೀ ಕಲ್ಪದಲ್ಲಿ ಯಾವ ಕಾರ್ಯವಾದರೆ ನಡೆದಿದೆಯೋ ಅದಕ್ಕೆ ಅತೀತವಾದ ಕಾರ್ಯ ಈಗ ನಡೆಯುತ್ತಿದೆ ಎಂದು. ಅಧರ್ ಕುಮಾರರು ಕುಟುಂಬದಲ್ಲಿ ಇರುತ್ತಲೂ, ಇಬ್ಬರು ಜೊತೆಯಲ್ಲಿ ಇರುತ್ತಲೂ ಸಹ ಸ್ವಪ್ನದಲ್ಲಿಯೂ ಪವಿತ್ರವಾಗಿಯೇ ಇರುತ್ತೇವೆ ಎಂಬ ಪ್ರತಿಜ್ಞೆಯನ್ನು ಮಾಡಬೇಕು. ಅವರು ಅಸಂಭವ ಎಂದು ತಿಳಿಯುವುದನ್ನು ಸಂಭವ ಮಾಡಿ ತೋರಿಸಬೇಕು. ಅವರು ಹುಲ್ಲು ಮತ್ತು ಕಿಡಿ ಜೊತೆ ಇರುವುದು ಅಸಂಭವ ಎಂದು ಭಾವಿಸುತ್ತಾರೆ ಮತ್ತು ನೀವೇನೆಂದು ಹೇಳುತ್ತೀರಿ? ಜೊತೆ ಇರುತ್ತಲೂ ಪವಿತ್ರವಾಗಿ

ಇರುತ್ತಿದ್ದೇವೆ ಎನ್ನುತ್ತೀರಿ. ಇಂತಹ ಪ್ರತಿಜ್ಞೆಯನ್ನು ಮಾಡುತ್ತೀರಲ್ಲವೇ? ಬಲಹೀನವಾಗಿ ಇಲ್ಲ ತಾನೇ? ಸ್ವಪ್ನದಲ್ಲಿ, ಸಂಕಲ್ಪದಲ್ಲಿಯೂ ಬರಬಾರದು. ಆಗಲೇ ಪ್ರತಿಜ್ಞೆಯನ್ನು ಮಾಡಬಲ್ಲಿರಿ. ದೊಡ್ಡ ದೊಡ್ಡ ಮಹಾಮಂಡಲೇಶ್ವರರು ಸಹ ನಿಮ್ಮ ಪಾದದ ಮೇಲೆ ಬಾಗುವ ದಿನವು ಸಹ ಬರುತ್ತದೆ ಆದರೆ ಆ ರೀತಿಯಾಗಿ ಸಂಪನ್ನರಾಗಬೇಕು. ಅಧರ್ ಕುಮಾರರ ಸಂಖ್ಯೆಯು ಸಹ ಬಹಳ ಹೆಚ್ಚಾಗಿ ಇದೆ. ಬ್ರಾಹ್ಮಣ ಪರಿವಾರದ ಶೋಭೆಯಾಗಿದೆ. ಒಳ್ಳೆಯದು.

ಈಗ ಇನ್ನೂ ಉಳಿದವರು ಬೋಲಾನಾಥನ ಮಧುರಾತಿ ಮಧುರವಾದ ಮಾತೆಯರು. ಎಷ್ಟು ಜನ ಮಾತೆಯರ ಗುಂಪು ಇದೆಯೋ ನೋಡಿರಿ. ಬಹಳ ಚೆನ್ನಾಗಿದೆ ಎಲ್ಲರನ್ನೂ ಟಿ.ವಿಯಲ್ಲಿ ತೋರಿಸಿರಿ. ಸೈನ್ಸ್ ಸಾಧನೆಗಳಿಂದ ಲಾಭವಂತು ಪಡೆಯುತ್ತಿದ್ದೀರಿ. ಶಕ್ತಿಸೇನೆ ಶಕ್ತಿಯರು ವಿಜಯೀ, ವಿಜಯೀ, ವಿಜಯೀ. ಬಾಪ್‌ದಾದಾ ಅಬಲೆಯರನ್ನು ಶಕ್ತಿವಂತರನ್ನಾಗಿ ತಯಾರು ಮಾಡಿದ್ದಾರೆ. ಈಗ ನಿಮ್ಮನ್ನು ನೀವು ಅಬಲೆಯಾಗಿ ಭಾವಿಸುತ್ತಿಲ್ಲ ತಾನೇ! ಶಕ್ತಿಯರಲ್ಲವೇ ಶಕ್ತಿಯರಾದ ಕಾರಣವೇ ವಿಜಯವು ಲಭಿಸುತ್ತಿದೆ.

ಶಕ್ತಿಯರ ವಿಜಯಕ್ಕೆ ಗುರುತಾಗಿ ಶಸ್ತ್ರಗಳನ್ನು ತೋರಿಸಿದ್ದಾರೆ. ಶಸ್ತ್ರಧಾರಿ ಶಕ್ತಿಗಳು ಅರ್ಥಾತ್ ಸರ್ವಶಕ್ತಿಗಳ ಶಕ್ತಿಯರು ಆದ್ದರಿಂದ ಸದಾ ನಿಮ್ಮನ್ನು ನೀವು ಸರ್ವಶಕ್ತಿ ಸ್ವರೂಪರಾಗಿ ಅನುಭವ ಮಾಡಿಕೊಳ್ಳಿರಿ. ಸರ್ವಶಕ್ತಿಗಳ ಸೂಚಕವೇ ನಿಮ್ಮ ಸ್ಮೃತಿ ಚಿಹ್ನೆಯಾಗಿದೆ ತಾನೇ! ಎಲ್ಲಾ ಶಕ್ತಿಗಳಿಂದ ಸಂಪನ್ನರಾಗಿದ್ದೀರಾ? ಬಹಳ ಒಳ್ಳೆಯದು. ವಿಜಯೀಗಳು ಸದಾ ವಿಜಯಿಯಾಗಿ ಇರುತ್ತೀರಿ. ಒಳ್ಳೆಯದು. ಎಲ್ಲರೊಂದಿಗೆ ಮಿಲನವಾಯಿತಲ್ಲವೇ? ಈಗ ಇನ್ನೂ ಯಾರು ನಾವು ತಂದೆಯೊಂದಿಗೆ ಭೇಟಿಯಾಗಲಿಲ್ಲ ಎಂದು ಹೇಳುವುದಿಲ್ಲ, ಎಲ್ಲರೊಂದಿಗೆ ಮಿಲನವಾಗಿಬಿಟ್ಟಿತು.

ಇಂಡೋರ್ ಹಾಸ್ಟೆಲ್ ಕುಮಾರಿಯರೊಂದಿಗೆ: ಆತ್ಮರ 21 ಕುಲಗಳ ಉದ್ಧರಣೆ ಮಾಡುವವರೇ ಕುಮಾರಿಯರು. ಎಷ್ಟು ಆತ್ಮರ 21 ಕುಲಗಳನ್ನು ಚೆನ್ನಾಗಿ ಮಾಡಿದ್ದೀರಿ? ಸೇವೆ ಮಾಡುತ್ತಿದ್ದೀರಾ ಅಥವಾ ಸೇವಾಧಾರಿಯಾಗುತ್ತಿದ್ದೀರಾ? ಚೆನ್ನಾಗಿ ತಯಾರಾಗುತ್ತಿದ್ದೀರಿ ತಾನೇ? ಈಗಲೂ ಏನಾದರೂ ನಡೆಯುತ್ತಿದ್ದರೆ ನಿಮಗೆ ಆಹ್ವಾನ ಲಭಿಸುತ್ತದೆ ಅಲ್ಲವೇ. ವಿಶೇಷ ಆತ್ಮರಾಗಿದ್ದೀರಿ. ವಿಶೇಷ ಆಹ್ವಾನದಿಂದ ನಿಮ್ಮನ್ನು ಕರೆಯುತ್ತಿದ್ದಾರೆ. ಸ್ವಯಂ ಸಹ ಶಕ್ತಿ ಸ್ವರೂಪರಾಗುತ್ತಿದ್ದೀರಿ ಮತ್ತು ಇತರರನ್ನು ತಯಾರು ಮಾಡುವುದರಲ್ಲಿ ಸಹ ಬುದ್ಧಿಯುಳ್ಳವರಾಗಿ ಹೊಳಪನ್ನು ತೋರಿಸುತ್ತಿದ್ದೀರಿ. ಒಳ್ಳೆಯದು, ಶುಭಾಶಯಗಳು.

**ನಾಲ್ಕು ಕಡೆ ಇರುವ ವಿಜಯೀ ರತ್ನಗಳಿಗೆ, ಸದಾ ನಿಶ್ಚಯಬುದ್ಧಿ ಸಹಜ ಸಫಲತಾಮೂರ್ತಿ ಮಕ್ಕಳಿಗೆ, ಸದಾ ನನ್ನ ಬಾಬಾ ಎಂಬ ಅಧಿಕಾರದಿಂದ ಪ್ರತಿಯೊಂದು ಸೇವೆಯಲ್ಲಿ ಸಫಲತೆಯನ್ನು ಪಡೆಯುವ ಸಫಲತಾ ಮೂರ್ತಿ ಮಕ್ಕಳಿಗೆ, ಸದಾ ಸಮಾಧಾನ ಸ್ವರೂಪರಿಗೆ, ಸಮಸ್ಯೆಯನ್ನು ಪರಿವರ್ತನೆ ಮಾಡುವ ಪರಿವರ್ತಕ ಆತ್ಮರಿಗೆ, ಈ ವಿಧವಾದ ಶ್ರೇಷ್ಠ ಮಕ್ಕಳಿಗೆ, ಸದಾ ತಂದೆಯನ್ನು ಪ್ರತ್ಯಕ್ಷ ಮಾಡುವ ಪ್ಲಾನ್ ಅನ್ನು ಪ್ರತ್ಯಕ್ಷದಲ್ಲಿ ತರುವ ಮಕ್ಕಳಿಗೆ, ಬಾಪ್‌ದಾದಾರವರ ಪ್ರಿಯಸ್ಮೃತಿಗಳು, ಶುಭಾಶಯಗಳು, ಶುಭಾಶಯಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 14-11-2002.

*ಬ್ರಾಹ್ಮಣ ಜೀವನದ ಬುನಾದಿ(ತಳಪಾಯ) ಮತ್ತು ಸಫಲತೆಗೆ ಆಧಾರ- ನಿಶ್ಚಯ ಬುದ್ಧಿ.*

ನಿಶ್ಚಯ ಬುದ್ಧಿ ಆತ್ಮರು ಸದಾ ತಂದೆಯೊಂದಿಗೆ ಕಂಬೈನ್ಡ್ ಆಗಿಯೇ ಇರುತ್ತಾರೆ. ಆದ್ದರಿಂದ ಎಲ್ಲಿ ತಂದೆ ಇರುತ್ತಾರೆಯೋ ಅಲ್ಲಿ ಸಫಲತೆಯು ಸದಾ ಲಭಿಸುತ್ತದೆ. ನಿಶ್ಚಯವೆಂಬುದು ತಂದೆಯ ಮೇಲೆ, ಸ್ವಯಂನ ಮೇಲೆ, ಡ್ರಾಮಾದ ಮೇಲೆ ಮತ್ತು ಜೊತೆಜೊತೆಗೆ ಪರಿವಾರದ ಮೇಲೆಯೂ ಇರಬೇಕು. ಈ ನಾಲ್ಕೂ ವಿಷಯಗಳ ನಿಶ್ಚಯದ ಆಧಾರವಾಗಿಯೇ ಸಫಲತೆಯು ಸಹಜವಾಗಿ ಮತ್ತು ಸ್ವತಹವಾಗಿ ಲಭಿಸುತ್ತದೆ. ನಾನು ತಂದೆಯವನು ಮತ್ತು ತಂದೆ ನನ್ನವನು ಇದೇ ನಿರಂತರ ವಿಜಯಕ್ಕೆ ಆಧಾರವಾಗಿದೆ.... ಪ್ರತಿಯೊಂದು ಬ್ರಾಹ್ಮಣ ಆತ್ಮನ ಸ್ಥಿರವಾದ ಅಡ್ರೆಸ್ ಸಹ ಮಧುಬನವೇ ಆಗಿದೆ. ಆತ್ಮ ನಿರಾಕಾರಿ ಆದ್ದರಿಂದ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗುವುದರಿಂದ ನಿರಾಕಾರಿ ತಂದೆಯ ಸ್ಮೃತಿ ಸಹಜವಾಗಿ ಮತ್ತು ತಂದೆಯ ಸಮಾನರನ್ನಾಗಿ ಮಾಡುತ್ತದೆ.  ತಂದೆಯ ಮೇಲೆ ಮನಸ್ಸಿದೆ ಆದರೆ ಕಾರ್ಯವನ್ನು ಮಾಡಿ ತೋರಿಸುತ್ತಿರುವಾಗ ತಂದೆಯ ಮನಸ್ಸಿಗೆ ಇಷ್ಟವಾದವರಾಗುತ್ತಾರೆ ಎನ್ನುತ್ತಾ ಸಮರ್ಥನಾದ ತಂದೆಯು ತನ್ನ ಸಮರ್ಥರಾದ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಮರ್ಥವಾಗಿ, ತಂದೆಯ ಸಮಾನವಾಗುವ ಶ್ರೇಷ್ಠ ಪುರುಷಾರ್ಥದಲ್ಲಿ ತೊಡಗಿದ್ದೇನೆ.

2. ನಾನು ಬಾಪ್‌ದಾದಾರವರ ಮಸ್ತಕದ ಕಿರೀಟವಾಗಿದ್ದೇನೆ.

3. ನಾನು ನನ್ನ ವಿಶೇಷತೆಯನ್ನು ತಿಳಿದುಕೊಂಡು ವಿಶ್ವ ಸೇವೆಯಲ್ಲಿ ಉಪಯೋಗಿಸುತ್ತಿದ್ದೆನೆ.

4. ನಾನು ತಂದೆಗೆ ಪ್ರಿಯವಾಗಿ ಮತ್ತು ಪರಿವಾರಕ್ಕೂ ಸಹ ಪ್ರಿಯವಾಗಿದ್ದೇನೆ.

5. ನಾನು ನಿಶ್ಚಯ ಬುದ್ಧಿಯಿಂದ ಇರುವ ಕಾರಣ ನನ್ನ ಪ್ರತಿಯೊಂದು ಸಂಕಲ್ಪದಲ್ಲಿ, ಪ್ರತಿಯೊಂದು ಕಾರ್ಯದಲ್ಲಿ ವಿಜಯವೇ ಲಭಿಸಿದೆ.

6. ಸಫಲತೆಯು ನನ್ನ ಕೊರಳಹಾರವಾಗಿದೆ.

7. ನಾನು ಸದಾ ತಂದೆಯೊಂದಿಗೆ ಕಂಬೈನ್ಡ್ ಆಗಿರುವ ಸಫಲತಾ ಸ್ವರೂಪ.

8. ನನಗೆ ತಂದೆಯ ಮೇಲೆ, ಸ್ವಯಂನ ಮೇಲೆ, ಡ್ರಾಮಾದ ಮೇಲೆ ಮತ್ತು ಜೊತೆ ಜೊತೆಗೆ ಪರಿವಾರದ ಮೇಲೆ ನಿಶ್ಚಯವಿದೆ.

9. ನನ್ನ ಪ್ರತಿಯೊಂದು ಸಂಕಲ್ಪದಲ್ಲಿ, ಪ್ರತಿಯೊಂದು ಕರ್ಮದಲ್ಲಿ ನಾನು ಪರಮಾತ್ಮನಿಂದ ಸ್ವಮಾನಧಾರಿ ಶ್ರೇಷ್ಠಾತ್ಮನು ಎಂಬ ಸ್ಮೃತಿಯಿಂದ ಸಹಜವಾಗಿ ಸಫಲತೆಯನ್ನು ಪಡೆದಿದ್ದೇನೆ.

10. ನಾನು ನಿಶ್ಚಯ ಬುದ್ಧಿಯಿಂದ "ನಾನು ತಂದೆಯವನು ಮತ್ತು ತಂದೆ ನನ್ನವರು" ಎಂದು ಸಫಲತೆಗೆ, ವಿಜಯಕ್ಕೆ ಅಧಿಕಾರಿಯಾಗಿದ್ದೇನೆ.

11. ನಾನು ಸಮಸ್ಯೆಯನ್ನು ಕ್ಷಣದಲ್ಲಿ ಸಮಾಧಾನ ಸ್ವರೂಪದಿಂದ ಪರಿವರ್ತನೆ ಮಾಡಿದ್ದೇನೆ.

12. ನನಗೆ ಸಮಸ್ಯೆ ಹೊಸದೇನಲ್ಲ ಅನೇಕ ಬಾರಿ ವಿಜಯೀಯಾಗಿದ್ದೇನೆ ಈಗಲೂ ಆಗುತ್ತಿದ್ದೇನೆ ಮತ್ತು ಇನ್ನು ಮುಂದೆಯೂ ಆಗುತ್ತೇನೆ ಈ ರೀತಿ ಡ್ರಾಮಾದ ಮೇಲೆ ನಿಶ್ಚಯ ಬುದ್ಧಿ ವಿಜಯೀ ರೂಪದಿಂದ ಇದ್ದೇನೆ.

13. ನಾನು ಪರಿವಾರದ ಮಧ್ಯದಲ್ಲಿ ಪರಿವಾರದ ಪ್ರತಿ ಪ್ರೀತಿಯನ್ನು ನಿಭಾಯಿಸುವುದರಲ್ಲಿಯೂ ವಿಜಯೀ ಆಗಿದ್ದೇನೆ.

14. ನಾನು ಪರಿವಾರದಲ್ಲಿ ವಿಶಾಲ ಹೃದಯದಿಂದ ಪ್ರತಿಯೊಬ್ಬರ ಸಂಸ್ಕಾರಗಳನ್ನು ಅರ್ಥ ಮಾಡಿಕೊಂಡು ತಿಳಿದು ನಿರ್ಮಾಣವಾಗಿ ಶುಭ ಭಾವನೆ, ಶುಭಕಾಮನೆಯ ವೃತ್ತಿಯಿಂದ ನಡೆಯುವ ಜ್ಞಾನ ಸ್ವರೂಪ.

15. ನಾನು ಹೇಗೆ(ಮಾಡುವುದು) ಎಂಬುದರ ಬದಲು ಹೀಗೆ (ಮಾಡಬೇಕು) ಎಂಬ ಶಬ್ದವನ್ನು ಉಪಯೋಗಿಸುವ ವಿಜಯೀ ಸ್ವರೂಪ.

16. ನಾನು ಪ್ರಭು ಪ್ರಿಯರಾಗುವುದರೊಂದಿಗೆ ಪರಿವಾರಕ್ಕೂ ಸಹ ಪ್ರಿಯವಾಗಿ ಎಲ್ಲದರಲ್ಲಿ ಉತ್ತೀರ್ಣ(ಪಾಸ್) ಆಗಿದ್ದೇನೆ.

17. ನಾನು ದೇಹದ ವ್ಯಾಯಾಮವನ್ನು ಮತ್ತು ನಿರಾಕಾರಿ ಮತ್ತು ಅವ್ಯಕ್ತ ಫರಿಶ್ತಾ ಆಗಿ ಮನಸ್ಸಿನ ವ್ಯಾಯಾಮವನ್ನು ಮಾಡಿ ತಂದೆಯ ಸಮಾನವಾಗಿದ್ದೇನೆ.

18. ನಾನು ಒಂದು ಕ್ಷಣದಲ್ಲಿ ನಿರಾಕಾರ ಸ್ಥಿತಿಯಲ್ಲಿ ಸ್ಥಿತವಾಗಿ ಆತ್ಮಿಕ ವ್ಯಾಯಾಮವನ್ನು ನಡೆದಾಡುತ್ತಾ, ತಿರುಗಾಡುತ್ತಾ, ಕರ್ಮ ಮಾಡುತ್ತಲೂ ಮಧ್ಯ ಮಧ್ಯದಲ್ಲಿ ಮಾಡುತ್ತಿದ್ದೇನೆ.

19. ನಾನು ಮನಸ್ಸಿನಿಂದ, ವಾಚಾದಿಂದ, ಸಂಬಂಧ ಸಂಪರ್ಕಗಳಿಂದ ಅರ್ಥಾತ್ ಕರ್ಮಣಾದ ಮೂಲಕವೂ ಸದಾ ಸೇವಾಧಾರಿಯಾಗಿದ್ದೇನೆ.

20. ನಾನು ಸೇವೆ ಮತ್ತು ತಪಸ್ಸು ಎರಡರ ಸಮಾನತೆಯಿಂದ ತಂದೆಯ ಪ್ರತ್ಯಕ್ಷತೆಯಾಗುತ್ತದೆ ಎಂಬ ಸ್ಮೃತಿ ಸ್ವರೂಪ.

21. ನಾನು ಕುಟುಂಬದಲ್ಲಿ ಇರುತ್ತಲೂ ಸ್ವಪ್ನದಲ್ಲಿ, ಸಂಕಲ್ಪದಲ್ಲಿಯೂ ಪವಿತ್ರವಾಗಿ ಇರುತ್ತೇನೆ ಎಂಬ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

22. ನಾನು ಸ್ವಯಂ ಅನ್ನು ಸರ್ವಶಕ್ತಿ ಸ್ವರೂಪವಾಗಿ ಅನುಭವ ಮಾಡಿಕೊಳ್ಳುತ್ತಿದ್ದೇನೆ.